ಸಾವಿತ್ರಿಯ ದುಃಖ ಕಟ್ಟೆಯೊಡೆಯಿತು. ಹೊಟ್ಟೆಯಿಂದ, ನಾಭಿಯಿಂದ, ನರನರಗಳಿಂದ ಉಕ್ಕಿದ ದುಃಖ ರೋದನೆಯಾಗಿ ಮಾರ್ಪಟ್ಟಿತು. ಎಲ್ಲಿದ್ದೇನೆಂದು ಮರೆತು ಆಕೆಯನ್ನು ಎದೆಗಪ್ಪಿಕೊಂಡು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

''ಏಯ್ ಯಾರಲ್ಲಿ... ಏಕೆ ಅಳುತ್ತಿದ್ದೀರಿ.'' ಅರಬ್ಬೀ ಭಾಷೆಯಲ್ಲಿ ಯಾರೋ ಕೂಗಿದರು.

ಚಂದ್ರು, ರವಿ ಇಬ್ಬರೂ ಆತಂಕದಿಂದ ಓಡಿಬಂದರು. ಆಕೆ ಸಾವಿತ್ರಿಯ ತಲೆ ನೇವರಿಸಿದಳು. ಕಣ್ಣೀರು ಒರೆಸಿಕೊಂಡಳು. ತಡೆಯಲಾರದ ದುಃಖವನ್ನು ಗುರುತಿಸಿ ಪೂರ್ತಿ ಸಮಾಧಾನವಾಗುವವರೆಗೂ ಅಪ್ಪಿಕೊಂಡು ಆಸರೆಯಾಗಿ ನಿಂತಳು.

''ದೊಡ್ಡಮ್ಮ... ನಿನಗೆ ಹುಚ್ಚಾ... ಇಲ್ಲೇನು ಹೊಸ ಕತೆ ಶುರುಮಾಡುತ್ತಿದ್ದೀಯ... ಸುಮ್ಮನಿರು'' ಕೋಪದಿಂದ ಸಾವಿತ್ರಿಯನ್ನು ಪಕ್ಕಕ್ಕೆ ಎಳೆದ ಚಂದ್ರು. ಒಂದಾಗಿದ್ದ ಇಬ್ಬರೂ ಬೇರೆಯಾದರು. ಗೋಡೆಯಲ್ಲಿ ಒಂದಾಗಿ ಬಾಗಿದ್ದ ಅವರ ನೆರಳು ಕೂಡ ಬೇರೆಯಾಯಿತು.

ಮನಸೋಇಚ್ಛೆ ಅತ್ತ ಸಾವಿತ್ರಿಗೆ ಎದೆಯಭಾರವಿಳಿದು ಹಗುರವೆನಿಸಿತು. ಬಹಳ ವರ್ಷಗಳಿಂದ ಗಡ್ಡೆಗಟ್ಟಿದ ದುಃಖ ಕರಗಿದ ಮೇಲೆ ಮನಸ್ಸು ಗಾಳಿಯಲ್ಲಿ ತೇಲಾಡುತ್ತಿರುವಂತಿದೆ.

''ಅಮ್ಮಾ... ತಾಯಿ... ಹಣ ಸಾಕಾಗುತ್ತಿಲ್ಲ. ಸ್ವಲ್ಪ ದಯೆ ತೋರಿಸಿ ನನ್ನ ಮಕ್ಕಳ ಪ್ರಾಣ ದಾನ ಮಾಡಮ್ಮಾ... ನಿನಗೆ ಅರ್ಥವಾಗುವ ಯಾವ ರೀತಿಯಲ್ಲಿ ಹೇಳಬೇಕೋ ನನಗೆ ಗೊತ್ತಿಲ್ಲ...'' ಎನ್ನುತ್ತ ತನ್ನ ಹತ್ತಿರ ಇದ್ದ ಹಣದ ಗಂಟನ್ನು ಸಾವಿತ್ರಿಯ ಕೈಯಲ್ಲಿಟ್ಟಳು. ಸಾವಿತ್ರಿ ಅದನ್ನು ತೆಗೆದುಕೊಳ್ಳಲಿಲ್ಲ. ಕೆಳಗೆ ಬೀಳುತ್ತಿರುವಾಗ ಚಂದ್ರು ಹಿಡಿದುಕೊಂಡ.

ಸಾವಿತ್ರಿ ಚಂದ್ರುವಿನ ಕೈಯಿಂದ ಗಂಟನ್ನು ಕಿತ್ತುಕೊಂಡು ಆಕೆಯ ಕೈಗೆ ಕೊಡುತ್ತ, ''ನನಗೆ ನಯಾಪೈಸೆ ಬೇಡ, ನಿನ್ನ ಮಕ್ಕಳನ್ನು ದಾನ ಮಾಡುವುದಿಲ್ಲ. ಎರಡು ಹುಲಿಗಳನ್ನು ದಾನ ಮಾಡುತ್ತೇನೆ'' ಎನ್ನುತ್ತ ಆಕೆಯ ಕೈ ಹಿಡಿದುಕೊಂಡು ಕೋರ್ಟ್ ಹಾಲ್‌ನತ್ತ ಹೆಜ್ಜೆ ಹಾಕಿದಳು.

### ಪೆದ್ದಿಂಟಿ ಅಶೋಕ್‌ಕುಮಾರ್

ಸಿರಿಸಿಲ್ಲ ಜಿಲ್ಲೆಯವರಾದ ಅಶೋಕ್‌ಕುಮಾರ್ ವೃತ್ತಿಯಲ್ಲಿ ಗಣಿತ ಶಿಕ್ಷಕ. ಇದುವರೆಗೆ ಆರು ಕಾದಂಬರಿಗಳು, ಏಳು ನಾಟಕಗಳು, ಏಳು ಕಥಾಸಂಕಲನಗಳು ಹಾಗೂ 100ಕ್ಕೂ ಹೆಚ್ಚು ಪ್ರಬಂಧಗಳನ್ನು ರಚಿಸಿದ್ದಾರೆ. ಇವರ 'ಜಿಗಿರಿ' ಕಾದಂಬರಿ 9 ಭಾಷೆಗಳಿಗೆ ಅನುವಾದಗೊಂಡಿದೆ. ಸಿನಿಮಾರಂಗದಲ್ಲೂ ಕೆಲಸ ಮಾಡಿದ್ದು, ಇತ್ತೀಚೆಗೆ ತೆರೆಕಂಡ 'ಮಲ್ಲೇಶಂ' ಸಿನಿಮಾಗೆ ಸಂಭಾಷಣೆ, ಗೀತೆಗಳನ್ನು ಬರೆದಿದ್ದಾರೆ.

### ಎಂ.ಜಿ. ಶುಭಮಂಗಳ

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆಯವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ, ಭಾರತೀಯ ವಿದ್ಯಾಭವನದ ಕನ್ನಡ ಪತ್ರಿಕೋದ್ಯಮ ಸ್ನಾತಕೋತ್ತರ ಡಿಪ್ಲೊಮಾ ಪದವೀಧರೆ. ಪತ್ರಕರ್ತೆಯಾಗಿ ವಿವಿಧ ನಿಯತಕಾಲಿಕಗಳಲ್ಲಿ ಕೆಲಸ ಮಾಡಿದ್ದಾರೆ. ಇಂಡಿಗೋ ಮಲ್ಟಿಮೀಡಿಯಾ ಪ್ರಕಟಣಾ ಸಂಸ್ಥೆಯ ಮೂಲಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರು ಕನ್ನಡಕ್ಕೆ ಅನುವಾದಿಸಿದ ತೆಲುಗು ಕತೆಗಳು, ಲೇಖನಗಳು, ಸಂದರ್ಶನಗಳು ಪತ್ರಿಕೆಗಳು ಹಾಗೂ ಅಂತರ್ಜಾಲ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.